# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸ.ಕಾ.ನಿ.ಅ/ಶ್ರೀರಾಮ/ಪಿಆರ್/ 05/20-21

ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು,
ಶ್ರೀರಾಮಮಂದಿರ ವಾರ್ಡ್ ಮಟ್ಟದ ಸಮಿತಿ
ಶ್ರೀರಾಮಮಂದಿರ ವಾರ್ಡ್ ಸಂ.108
ಬೆಂಗಳೂರು, ದಿನಾಂಕ: 15/12/2020.

## ದಿನಾಂಕ:09.12.2020 ರಂದು ನಡೆದ ಸಭಾ ನಡವಳಿಗಳು:

### ಸಭೆಯಲ್ಲಿ ಹಾಜರಿದ್ದವರು.

1. ಶ್ರೀ ಮಂಜೇಶ್ ಬಿ ಜೆ.ಡಿ.ಟಿ.ಪಿ.ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಕೆ.ಪಿ ಉಮೇಶ್ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಇಂಜಿನಿಯರ್.
3. ಶ್ರೀ ಸುಬ್ರಮಣ್ಯ ಪದಕಿ ಹಿರಿಯ ಆರೋಗ್ಯ ಪರೀವೀಕ್ಷಕರು ಸದಸ್ಯರು.
4. ಶ್ರೀ ವಿನಾಯ್ ಕಿರಿಯ ಆರೋಗ್ಯ ಪರಿವೀಕ್ಷರು ಸದಸ್ಯರು.
5. ಶ್ರೀ ಹರಿಪ್ರಸಾದ್ ಸದಸ್ಯರು
6. ಶ್ರೀ ಶ್ರೀಧರ್ ಸದಸ್ಯರು.
7. ಶ್ರೀ ಮಂಜುನಾಥ್ ಬಿ ಎಸ್ ಸದಸ್ಯರು.
8. ಶ್ರೀ ವೆಂಕಟೇಶ್ ಬಾಬು ಸದಸ್ಯರು
9. ಶ್ರೀ ಮೋಹನ್ ರಾಜ್ ಸದಸ್ಯರು
10. ಶ್ರೀ ಬಿ ಕಿರಣ್ ಸದಸ್ಯರು.
11. ಶ್ರೀ ಜಿ.ಪಿ ನಾಗೇಶ್ ಸದಸ್ಯರು
12. ಶ್ರೀ ದಿನೇಶ್ ಶೇಷಾದ್ರಿ ಸದಸ್ಯರು
13. ಶ್ರೀ ವಿಜಯ್ ASI ಮಾಗಡಿರಸ್ತೆ ಪೊಲೀಸ್ ಠಾಣೆ
14. ಶ್ರೀ ಶಂಕರ್ ASI ಮಾಗಡಿರಸ್ತೆ ಪೊಲೀಸ್ ಠಾಣೆ
15. ಶ್ರೀ ನರಸಿಂಹ ಆರ್ ಬಿ.ಡಬ್ಲ್ಯು.ಎಸ್.ಎಸ್.ಬಿ
16. ಶ್ರೀ ಕಾಂತ್ ರಾಜ್ ಹೆಡ್ ಕಾನ್ಸಟೇಬಲ್

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಬಿ ಮಂಜೇಶ್ ಮತ್ತು ಕಾರ್ಯದರ್ಶಿಗಳಾದ ಹಾಗೂ ವಾರ್ಡ್ ಇಂಜಿನಿಯರ್ ಆದ ಶ್ರೀ ಕೆ.ಪಿ ಉಮೇಶ್ ರವರು ಸಭೆಗೆ ಆಗಮಿಸಿದ ಎಲ್ಲಾರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಅಧ್ಯಕ್ಷರಯನ್ನು ವಾರ್ಡ್ ಸಭೆಯ ಕುಂದುಕೊರತೆಗಳ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ಸಂ.108ರ ವ್ಯಾಪ್ತಿಯಲ್ಲಿ ಬರುವ ಘನತ್ಯಾಜ್ಯ ರಸ್ತೆ ಗುಂಡಿ ಮುಚ್ಚುವ ಬಗ್ಗೆ ಬೀದಿ ದೀಪಗಳ ನಿರ್ವಹಣೆ ಬಗ್ಗೆ ಹಾಗೂ ಸಂಬಂಧಿಸಿದ ವಿಷಯಗಳಿಗೆ ಚರ್ಚಿಸಲು ಸದಸ್ಯರುಗಳಿಗೆ ತಿಳಿಸಿದರು.

ಹಿಂದಿನ ದಿನಾಂಕ:28/11/2020 ರಂದು ನಡೆದ ಸಭೆಯ ಸಭಾ ನಡವಳಿಯನ್ನು ಚರ್ಚಿಸಿ, ಬಾಕಿಯಿರುವ ಕುಂದುಕೊರತೆಗಳನ್ನು ಪೂರೈಸಲು ಸಭೆಯಲ್ಲಿ ತಿಳಿಸಿರುತ್ತಾರೆ.

**ವೆಂಕಟೇಶ್ ಬಾಬು ಮಾತಾನಾಡುತ್ತಾ,**

ಹಿಂದೆ ರಸ್ತೆ ಕಾಮಗಾರಿ ವೇಳೆ ಹಳೇ ಗ್ರಿಲ್ ತೆಗೆಯಲು ಎಲ್ಲಿ ಶೇಖರಣೆಯಾಗಿರುತ್ತದೆ ಮತ್ತು ಈ ವಿಷಯಗಳನ್ನು ಕಾಮಗಾರಿಗಳ ವೇಳೆ ಯಾವ ಕ್ರಮ ಕೈಗೊಂಡಿರುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಲು ತಿಳಿಸಿದರು. ಈ ಹಿಂದೆ 6ನೇ ಬ್ಲಾಕ್ ಸಿದ್ದರಾಮದಿಣ್ಣೆ ರಸ್ತೆಯಲ್ಲಿ ಕಾಂಕ್ರಿಟ್ 6ನೇ ಬ್ಲಾಕ್ ರಸ್ತೆ ಕಾಂಕ್ರಿಟ್ ಕಾಮಗಾರಿ ಮತ್ತು Shoulder drain ಕಾಮಗಾರಿ ಆಗಿರುವುದಿಲ್ಲ. ಅದರೂ ಕಾಮಗಾರಿ ಆಗಿದೆ ಎಂದು ಬಿಲ್ ಪಾವತಿ ಸಲಾಗಿರುತ್ತದೆ. ಬಿಲ್ ಪಾವತಿಯಾಗಿರುವ ಬಗ್ಗೆ ಸಭೆಯಲ್ಲಿ ಅಸಮದಾನ ವ್ಯಕ್ತಪಡಿಸಿದರು. ಮುಂದಿನ ಸಭೆಯಲ್ಲಿ ಇದರ ಬಗ್ಗೆ ವಿವರಣೆಕೊಡುವಂತೆ ಕೋರಿರುತ್ತಾರೆ.

**ಶ್ರೀ ಬಿ ನಾಗೇಶ್ ಮಾತಾನಾಡುತ್ತಾ,**

ಸದರಿ ವಾರ್ಡಿನಲ್ಲಿರುವ ಬೋರ್‌ವೆಲ್‌ಗಳು ಎಷ್ಟು ಕಾರ್ಯನಿರ್ವಹಿಸುತ್ತದೆ ಎಷ್ಟು ಕಾರ್ಯನಿರ್ವಹಿಸುತ್ತಿಲ್ಲ ಎಂಬುದಕ್ಕೆ ವಿವರಣೆ ಕೇಳಿದರು. ಬೋರ್‌ವೆಲ್ ನಿರ್ವಹಣೆ ಹೇಗೆ? ಎಂಬುದರ ಬಗ್ಗೆ ಕೇಳಿದಾಗ ಶ್ರೀ ಹರೀಶ್ ನಾಯಕ್ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿ ಫೋನ್ ಕರೆಗಳನ್ನು ಸ್ವೀಕರಿಸುತ್ತಿಲ್ಲ, ಈ ವಿಷಯದ ಪರವಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿಗೆ. ಸಂಬಂಧಿಸಿದ Sri Narashimha Work Inspector ಸಭೆಯಲ್ಲಿ ಹಾಜರಿದ ಇವರಿಗೆ ತಿಳಿಸಲಾಯಿತು.

**ಶ್ರೀ ದಿನೇಶ್ ಮಾತಾನಾಡುತ್ತಾ,**

Under Passನಲ್ಲಿ ಲೈಟ್ ಇರುವುದಿಲ್ಲ ವಾಹನ ಸಂಚಾರಕ್ಕೆ ತೊಂದರೆಯಾಗುತ್ತದೆ. ಮಧು ಪಾರ್ಕ್ ಹತ್ತಿರ ಕಸ ತೆಗೆಯುವುದಿಲ್ಲ. ಕಸ ರಸ್ತೆಯಲ್ಲೇ ಹಾಕುತ್ತಾರೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಬೇಕೆಂದು ಸಭೆಯಲ್ಲಿ ಚರ್ಚಿಸಿದರು.

ಈ ಮೇಲ್ಕಂಡ ಎಲ್ಲಾ ಸದಸ್ಯರುಗಳ ಮೌಖಿಕ ಅಹವಾಲುಗಳನ್ನು ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಗಮನಿಸುತ್ತಾ, ಆರೋಗ್ಯ ಇಲಾಖೆ, ಕಾಮಗಾರಿ ಇಲಾಖೆ, ನೀರು ಹಾಗೂ ಒಳಚರಂಡಿ ಸರಬರಾಜು ಇಲಾಖೆ, ಬೆಸ್ಕಾಂ ವಿಭಾಗ ಮತ್ತು ಪೊಲೀಸ್ ಇಲಾಖೆಗಳಿಗೆ ಸಂಬಂಧಿಸಿದಂತೆ, ಕುಂದುಕೊರತೆಗಳನ್ನು ಆಲಿಸಿ, ಶೀಘ್ರದಲ್ಲೇ ಬಗೆಹರಿಸುವಂತೆ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು ಮತ್ತು ಸದರಿ ವಾರ್ಡಿಗೆ ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಶ್ರೀರಾಮಮಂದಿರ ಉಪವಿಭಾಗ ರವರು ಇಲ್ಲಿಯವರೆಗೂ ಯಾವುದೇ ಸಭೆಗೆ ಹಾಜರಾಗಿರುವುದಿಲ್ಲ. ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಸಹ ಸೂಚಿಸಿದರು.

**ಶ್ರೀಧರ್ ಮಾತಾನಾಡುತ್ತಾ:**

ಸದರಿ ವಾರ್ಡ್‌ನಲ್ಲಿ road humps ಹಾಕುವುದಕ್ಕೆ ರಸ್ತೆ ಪಕ್ಕ ವಾಹನ ನಿಲುಗಡೆ ತಳ್ಳುವಗಾಡಿಗಳ ತೆರವು ಮಾಡುವುದು ಡಾ॥ ರಾಜ್ ಕುಮಾರ್ ರಸ್ತೆಯಲ್ಲಿ ಹಾದು ಹೋಗುವ ಸಂಚಾರಿ ವ್ಯವಸ್ಥೆ ಭ್ಯಾಸಂ ಸರ್ಕಲ್ ಹತ್ತಿರ ರಸ್ತೆಗೆ ಬಾಗಿರುವ ಮರದ ಕೊಂಬೆಗಳನ್ನು ತೆಗೆಯುವುದು. ದೇವಸ್ಥಾನ ಹತ್ತಿರ ಚಪ್ಪಲಿ ಕಳ್ಳತನವಾಗುವ ಬಗ್ಗೆ ರಾಮಮಂದಿರ ದೇವಸ್ಥಾನದ ಸುತ್ತ ಮತ್ತು ರಾಜಾಜಿನಗರ ಮುಖ್ಯದ್ವಾರದ ಅಂಡರ್ ಪಾಸ್ ಪಾದಚಾರಿಗಳಲ್ಲಿ ಗಿಡ ಅಲಂಕರಿಸುವುದು ಬಗ್ಗೆ ಸಭೆಯ ಮುಂದೆ ಚರ್ಚಿಸಿದರು.

**ಶ್ರೀ ಮಂಜುನಾಥ್ ಮಾತಾನಾಡುತ್ತಾ:**

ಈ ವಾರ್ಡಿಗೆ ಸಂಬಂಧಿಸಿದಂತೆ, 6ನೇ ಬ್ಲಾಕ್ ಭಾರತ್ ಪೆಟ್ರೋಲಿಯಂ ಬಂಕ್ ಹತ್ತಿರ ರಸ್ತೆ ಉಬ್ಬುಗಳು ಕಾಣುತ್ತಿಲ್ಲ. ಬೀದಿ ದೀಪಗಳ ನಿರ್ವಹಣೆ ಮತ್ತು ರಸ್ತೆಬದಿಯಲ್ಲಿ ವಾಹನ ನಿಲುಗಡೆ ತೆರವುಗೊಳಿಸುವುದರ ಸಂಚಾರಿ ಪೋಲೀಸ್ ರವರಿಗೆ ದೂರು ನೀಡಲು ಸಭೆಯಲ್ಲಿ ತಿಳಿಸಿದರು.

**ಸಂಚಾರಿ ಪೋಲೀಸ್ ಅಧಿಕಾರಿಗಳು ಮಾತಾನಾಡುತ್ತಾ,**

ರಾಜಾಜಿನಗರ Under Passನ ಮುಖಾಂತರ ಮುಖ್ಯ ಮಂತ್ರಿಗಳು ಆಗಾಗ್ಗೆ ಹಾದು ಹೋಗುತ್ತಿರುತ್ತಾರೆ. ಈ ಸ್ಥಳದಲ್ಲಿ ಕಸ ತೆಗೆಯುವುದು. ರಸ್ತೆ ಉಬ್ಬು ಅಳವಡಿಸುವುದು ಮತ್ತು ರಸ್ತೆ ಉಬ್ಬುಗಳನ್ನು ನಿಯಮಾವಳಿ ಪ್ರಕಾರ ರಸ್ತೆ ಉಬ್ಬುಗಳನ್ನು ಎತ್ತರಿಸುವುದರ ವಿಷಯದ ಬಗ್ಗೆ ಸಭೆಯಲ್ಲಿ ಹೇಳಿದರು.

**ಬಿ ಕಿರಣ್ ಮಾತಾನಾಡುತ್ತಾ,**

ಈ ವಾರ್ಡಿಗೆ ಸಂಬಂಧಿಸಿದಂತೆ, ಆಟದ ಮೈದಾನವನ್ನು ದುರಸ್ಥಿ ಮಾಡಲು ಈಗಾಗಲೇ ಟೆಂಡರ್ ಆಹ್ವಾನಿಸಲಾಗಿದ್ದು, ಶೀಘ್ರದಲ್ಲೇ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ಮತ್ತು ಜೇಡರಹಳ್ಳಿ ಹಿಂಭಾಗ ಬಿ.ಡಬ್ಲ್ಯೂ.ಎಸ್.ಎಸ್.ಬಿಗೆ ಸಂಬಂಧಿಸಿದಂತೆ Chamber ದುರಸ್ಥಿ ಕಾರ್ಯ ನಿರ್ವಹಿಸಲು ಮತ್ತು ರಸ್ತೆಗಳ ಗುಂಡಿ ಮುಚ್ಚುವ ಕಾಮಗಾರಿಯ ಬಗ್ಗೆ ಸಭೆಯಲ್ಲಿ ತಿಳಿಸಿದರು.

**ಶ್ರೀ ಮೋಹನ್ ರಾಜ್ ಮಾತಾನಾಡುತ್ತಾ,**

6ನೇ ಬ್ಲಾಕ್, 10ನೇ ಅಡ್ಡರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಛೇಂಬರ್ ಶಿಥಿಲವಾಗಿರುತ್ತದೆ. ತುರ್ತಾಗಿ ದುರಸ್ಥಿಗೊಳಿಸಲು ಹಾಗೂ Beauty Park 4ನೇ ಬ್ಲಾಕ್‌ಗೆ ಸಂಬಂಧಿಸಿದ ಕಾಮಗಾರಿ ಓ.ಎಫ್.ಸಿ ನೇತಾಡುವುದು ಹಾಗೂ ವಿದ್ಯುತ್ ಕಂಬಕ್ಕೆ ಕಟ್ಟಿರುವುದು ಮತ್ತು ವಾರ್ಡಿನಲ್ಲಿ ನಾಮಫಲಕಗಳನ್ನು ಅಳವಡಿಸುವುದರ ಬಗ್ಗೆ ಮತ್ತು ಹಳೆಯ ಬಿದ್ದು ಹೋಗಿರುವ ನಾಮಫಲಕಗಳನ್ನು ಒಂದು ಕಡೆ ಸಂಗ್ರಹಿಸುವುದು. ಸಭೆಯಲ್ಲಿ ಚರ್ಚಿಸಿ, ಶೀಘ್ರ ಕ್ರಮಗೊಳ್ಳುವುದಕ್ಕೆ ತಿಳಿಸಿದರು.

ಮುಂದುವರೆದಂತೆ, ಕೊನೆಯಲ್ಲಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳ ಅನುಮತಿ ಮೇರೆಗೆ ಸದಸ್ಯ ಕಾರ್ಯದರ್ಶಿಗಳಾದ ಹಾಗೂ ಸಹಾಯಕ ಇಂಜಿನಿಯರ್ ಆದ ಶ್ರೀ ಕೆ.ಪಿ ಉಮೇಶ್ ರವರು ಎಲ್ಲಾರಿಗೂ ವಂದಿಸಿ, ಸಭೆ ಮುಕ್ತಾಯಗೊಳಿಸಿದರು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಆದೇಶದ ಮೇರೆಗೆ.

ಸಹಿ/-
ಸದಸ್ಯರು ಕಾರ್ಯದರ್ಶಿ ಹಾಗೂ
ವಾರ್ಡ್ ಸಂ. 108
ಸಹಾಯಕ ಅಭಿಯಂತರರು

ಸಹಿ/-
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಮಟ್ಟದ ಸಮಿತಿ
ವಾರ್ಡ್ ಸಂ.108, ಶ್ರೀರಾಮಮಂದಿರ.

<u>ಪ್ರತಿಯನ್ನು:</u>

1. ಮಾನ್ಯ ಶಾಸಕರು ರಾಜಾಜಿನಗರ ವಿಧಾನ ಸಭಾ ಕ್ಷೇತ್ರ ರಾಜಾಜಿನಗರ ರವರಿಗೆ ಸಲ್ಲಿಸಲಾಗಿದೆ.
2. ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ. 108 ರವರಿಗೆ ಸಲ್ಲಿಸಲಾಗಿದೆ.
3. ಜಂಟಿ ಆಯುಕ್ತರು (ಪಶ್ಚಿಮ) ರವರಿಗೆ ಸಲ್ಲಿಸಲಾಗಿದೆ.
4. ಮುಖ್ಯ ಅಭಿಯಂತರರು (ಪ) ರವರಿಗೆ ಸಲ್ಲಿಸಲಾಗಿದೆ.
5. ಕಾರ್ಯಪಾಲಕ ಅಭಿಯಂತರರು ರಾಜಾಜಿನಗರ ವಿಭಾಗ ರವರಿಗೆ ಸಲ್ಲಿಸಲಾಗಿದೆ.
6. ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಪಶ್ಚಿಮ) ರವರಿಗೆ ಸಲ್ಲಿಸಲಾಗಿದೆ.
7. ಆರೋಗ್ಯ ವೈದ್ಯಾಧಿಕಾರಿಗಳು ಶ್ರೀರಾಮಮಂದಿರ ವಲಯ ರವರಿಗೆ ಸಲ್ಲಿಸಲಾಗಿದೆ.
8. ಸಹ ಕಂದಾಯ ಅಧಿಕಾರಿ ಶ್ರೀರಾಮಮಂದಿರ ವಲಯ ರವರಿಗೆ ಸಲ್ಲಿಸಲಾಗಿದೆ.
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಪರಿಸರ ನಿರ್ವಹಣೆ) ರವರಿಗೆ ಸಲ್ಲಿಸಲಾಗಿದೆ.
10. ತೋಟಗಾರಿಕೆ ಅಧಿಕ್ಷಕರು (ಪಶ್ಚಿಮ) ರವರಿಗೆ ಸಲ್ಲಿಸಲಾಗಿದೆ.
11. ಅರಣ್ಯ ಅಧಿಕಾರಿಗಳು (ಪಶ್ಚಿಮ) ರವರಿಗೆ ಸಲ್ಲಿಸಲಾಗಿದೆ.
12. ಕಾರ್ಯಪಾಲಕ ಅಭಿಯಂತರರು (ಬಿಡಬ್ಲ್ಯೂಎಸ್‌ಎಸ್‌ಬಿ ರಾಜಾಜಿನಗರ ವಿಭಾಗ) ರವರಿಗೆ ಸಲ್ಲಿಸಲಾಗಿದೆ.
13. ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ ರಾಜಾಜಿನಗರ ವಿಭಾಗ) ರವರಿಗೆ ಸಲ್ಲಿಸಲಾಗಿದೆ.
14. ಪೊಲೀಸ್ ಇನ್ಸ್‌ಪೆಕ್ಟರ್ ಕಾನೂನು ಮತ್ತು ಸುವ್ಯವಸ್ಥೆ ರಾಜಾಜಿನಗರ ವಿಭಾಗ ರವರಿಗೆ ಸಲ್ಲಿಸಲಾಗಿದೆ.
15. ಪೊಲೀಸ್ ಇನ್ಸ್‌ಪೆಕ್ಟರ್ ಕಾನೂನು ಮತ್ತು ಸುವ್ಯವಸ್ಥೆ ಮಾಗಡಿ ವಿಭಾಗ ರವರಿಗೆ ಸಲ್ಲಿಸಲಾಗಿದೆ.
16. ಪೊಲೀಸ್ ಇನ್ಸ್‌ಪೆಕ್ಟರ್, ಸಂಚಾರಿ ಪೊಲೀಸ್ ಠಾಣೆ ರಾಜಾಜಿನಗರ ವಿಭಾಗ ರವರಿಗೆ ಸಲ್ಲಿಸಲಾಗಿದೆ.
17. ಕಛೇರಿ ಕಡತಕ್ಕೆ.

ಸದಸ್ಯರು ಕಾರ್ಯದರ್ಶಿ ಹಾಗೂ
ವಾರ್ಡ್ ಸಂ. 108
ಸಹಾಯಕ ಅಭಿಯಂತರರು

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಮಟ್ಟದ ಸಮಿತಿ
ವಾರ್ಡ್ ಸಂ.108, ಶ್ರೀರಾಮಮಂದಿರ.